# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 160/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಮಹದೇವಶೆಟ್ಟಿ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಗೋಪ ಶೆಟ್ಟಿ | | **08.10.2024** |
| ವಯಸ್ಸು | ಃ 37 ವರ್ಷ | | |
| ವೃತ್ತಿ | ಃ ಡ್ರೈವರ್ | ಪ್ರಾ.ಸಾ. | ಃ 07 |
| ವಾಸಸ್ಥಳ | ಃ ಹೆಮ್ಮರಗಾಲ | ಚಾ.ಸಾ. | ಃ 06 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ಈಗ 2 ವರ್ಷಗಳ ಹಿಂದೆ ಒಂದು ದಿನ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಒಬ್ಬ ವ್ಯಕ್ತಿಯ ಶವ ಪರೀಕ್ಷೆ ಮಾಡುವ ಕಾಲಕ್ಕೆ ನನ್ನ ಸಹಿ ಪಡೆದಿದ್ದರು. ಆದರೆ ಆ ವ್ಯಕ್ತಿ ಯಾರೆಂದು ನನಗೆ ಗೊತ್ತಿಲ್ಲ. ಆ ವ್ಯಕ್ತಿಯ ದೇಹದ ಮೇಲೆ ಎಲ್ಲೆಲ್ಲಿ ಗಾಯಗಳಾಗಿತ್ತು ಎಂದು ನಾನು ನೋಡಿಲ್ಲ. ಆ ವ್ಯಕ್ತಿ ಯಾವ ಕಾರಣಕ್ಕೆ ಮತ್ತು ಹೇಗೆ ಮರಣಹೊಂದಿದ್ದು ಎಂದು ನನಗೆ ಗೊತ್ತಿಲ್ಲ. ನಿ.ಪಿ-11 ಫೋಟೋವನ್ನು ಸಹ ಅದೇ ಸ್ಥಳದಲ್ಲಿ ತೆಗೆದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-10 ನಾನು ಸಹಿ ಮಾಡಿದ್ದ ದಾಖಲೆಯಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-10(ಸಿ) ಎಂದು ಗುರುತಿಸಿದೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

*2.* ದಿಃ*04.01.2022* ರಂದು ಶವ ಮಹಜರ್ ಮಾಡಿದ್ದರು ಎಂದರೆ ನನಗೆ ದಿನಾಂಕ ಗೊತ್ತಿಲ್ಲ. ಮೃತ ಬಾಲಕನ ಹೆಸರು ಮಹೇಶ ಇರುತ್ತದೆ ಎಂದರೆ ಗೊತ್ತಿಲ್ಲ. ಆ ಮಹೇಶನ ದೇಹದ ಮೇಲೆ ಎಡ ಕಾಲಿನ ಮೇಲೆ ತರಚಿದ ಗಾಯ ಆಗಿದ್ದು, ಎರಡು ಕಣ್ಣುಗಳು ಊದಿಕೊಂಡಿದ್ದು, ಬಾಯಿ ಮತ್ತು ಮೂಗಿನಿಂದ ರಕ್ತ ಬಂದಿತ್ತು ಎಂದರೆ ನಾನು ನೋಡಿಲ್ಲ. ಈ ಪ್ರಕರಣದ ಆರೋಪಿತರು ವಾಮಚಾರ ಮಾಡಿ ಮಹೇಶನನ್ನು ಬಲಿ ಕೊಡುವ ಸಲುವಾಗಿ ಸಾಯಿಸಿರಬಹುದು ಅಥವಾ ಮಹೇಶ ಕಾರು ತೊಳೆಯುವಾಗ ಮರಣಹೊಂದಿರಬಹುದು ಎಂದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-*11* ಪೊಟೋವನ್ನು ಶವ ಪಂಚನಾಮೆ ಕಾಲಕ್ಕೆ ತೆಗೆದಿದ್ದರು ಎಂದರೆ ಪೊಟೋ ತೆಗೆದಿದ್ದು ಮಾತ್ರ ನಿಜ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ-** ಇಲ್ಲ

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*